ಚಂಡಕಾಪುರ 22. ಮುಡಬಿ 23. ಎಕಲೂರು 24. ಹಾರಕೂಡ 25. ಕಲಕೋರ 26. ಕೊಹಿನೂರ 27. ಬಟಗೇರಾ 28. ಲಾಡವಂತಿ 29. ಬೋಸಗಾ 30. ಮಂಚಲಮ್

ಆ) 1) ಕಿಟ್ಟ ಗ್ರಾ.ಪಂ.:– ಅಧ್ಯಕ್ಷರಾದ ಶ್ರೀ ಮಲ್ಲರೆಡ್ಡಿ ಬಸರೆಡ್ಡಿ
2) ರಾಜೇಸ್ವರ ಗ್ರಾ.ಪಂ.:– ಅಧ್ಯಕ್ಷರಾದ ಶ್ರೀ ಶಂಕರ ಮಲ್ಲಪ್ಪ ಹಾಗೂ ಕಾರ್ಯದರ್ಶಿಯಾದ ಶ್ರೀ ವಿಜಯ ಕುಮಾರ್ ಜಗತಾಪ

ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) :–

1058 (1407) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ಹುನಗುಂದ ತಾಲ್ಲೂಕಿನ ಚಿಕ್ಕಮಾಗಿಯಿಂದ ಹಿರೇಮಾಗಿಯ ಮಧ್ಯೆ ಮಲಪ್ರಭಾ ನದಿಗೆ ಬ್ಯಾರೇಜ್ ಕಂ ಬ್ರಿಡ್ಜ್ ನಿರ್ಮಾಣ ಕಾರ್ಯ ಸರ್ಕಾರದ ಗಮನಕ್ಕಿದೆಯೇ;

ಆ) ಈ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಇ) ಈ ಕಾಮಗಾರಿಗೆ ಮಂಜೂರಾತಿ ದೊರೆತಿದ್ದಲ್ಲಿ ಕಾರ್ಯ ಪ್ರಾರಂಭಕ್ಕೆ ವಿಳಂಬವೇಕೆ; (ವಿವರ ನೀಡುವುದು)?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :–

ಅ) ಕಾಮಗಾರಿಯ ಬಗ್ಗೆ ಗಮನಕ್ಕೆ ಬಂದಿದೆ. ಆದರೆ, ಈ ಕಾಮಗಾರಿಯು ಬ್ರಿಡ್ಜ್ ಕಂ ಬ್ಯಾರೇಜ್ ಆಗಿರದೆ ಕೇವಲ ಬ್ಯಾರೇಜ್ ಕಾಮಗಾರಿ ಆಗಿರುತ್ತದೆ.

ಆ) ಸದರಿ ಬ್ಯಾರೇಜಿನ ಸಾಧ್ಯತಾ ವರದಿಗೆ ಮುಖ್ಯ ಇಂಜಿನೀಯರ್, ನೀರಾವರಿ (ಉತ್ತರ), ಬೆಳಗಾಂ ಇವರಿಂದ ಅನುಮೋದನೆ ನೀಡಲಾಗಿದ್ದು, ವಿವರವಾದ ವಿನ್ಯಾಸ, ನಕ್ಷೆ ಹಾಗೂ ಅಂದಾಜು ಪತ್ರಿಕೆಯನ್ನು ಖಾಸಗಿ ಸಲಹೆಗಾರರಾದ ಮೆ॥ ಏಬಲ್ ಇಂಜಿನಿಯರಿಂಗ್, ಬೆಂಗಳೂರು ಇವರಿಂದ ತಯಾರಿಸಲ್ಪಡುತ್ತಿದೆ.

ಇ) ಈ ಕಾಮಗಾರಿಯ ವಿವರವಾದ ಅಂದಾಜು ತಯಾರಿಕೆಯ ಕಾರ್ಯವು ಇನ್ನೂ ಪೂರ್ಣಗೊಳ್ಳದಿರುವುದರಿಂದ, ಅಂದಾಜಿಗೆ ತಾಂತ್ರಿಕ ಮಂಜೂರಾತಿ ದೊರೆತಿರುವುದಿಲ್ಲ. ಆದುದರಿಂದ, ಕಾಮಗಾರಿಯು ಪ್ರಾರಂಭಗೊಂಡಿರುವುದಿಲ್ಲ.

ಶ್ರೀ ನರೇಂದ್ರ ಬಾಬು ನೆ.ಲ. (ರಾಜಾಜಿನಗರ) :–

1059 (519) ಮಾನ್ಯ ವಸತಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–